


# ವಂದೇ ಭಾರತ್ ಎಕ್ಸ್‌ಪ್ರೆಸ್ ‘ಹಳಿತಪ್ಪಿದ್ದು’ ಏಕೆ?

**ವೈಫೈ, ರೈಲ್ವೆ ನಿಲ್ದಾಣ ಆಧುನೀಕರಣದಂಥ ವಿಚಾರಗಳಿಗೆ ಕೋಟಿಕೋಟಿ ಖರ್ಚು ಮಾಡುತ್ತಿರುವ ರೈಲ್ವೆ ಇಲಾಖೆ ಆವಿಷ್ಕಾರ, ಹೊಸ ತಂತ್ರಜ್ಞಾನ ಆಳವಡಿಕೆಯಂಥ ವಿಚಾರಗಳಿಗೆ ಇನ್ನಾದರೂ ಅಗತ್ಯ ಗಮನ ಕೊಡಬೇಕು. ಸಿಬ್ಬಂದಿಯ ಸಲಹೆ ಮತ್ತು ಸಂಶೋಧನೆಗಳಿಗೆ ಬೆಲೆ ಸಿಗುವಂಥ ವಾತಾವರಣ ನಿರ್ಮಾಣವಾಗಬೇಕಿದೆ.**

■ **ಡಿ.ಎಂ. ಘನಶ್ಯಾಮ**

ಬೆಂಗಳೂರಿನ ಯಶವಂತಪುರದಿಂದ ಮಹಾರಾಷ್ಟ್ರದ ಲಾತೂರ್‌ಗೆ ಬೀದರ್ ಮಾರ್ಗವಾಗಿ ‘ಲಾತೂರ್ ಎಕ್ಸ್‌ಪ್ರೆಸ್’ ಪ್ರತಿದಿನ ಸಂಚರಿಸುತ್ತದೆ. ಹೊಸ ವಿನ್ಯಾಸದ ಬೋಗಿಗಳು, ಆಕರ್ಷಕ ಇಂಟೀರಿಯರ್ಸ್, ಹೊಳೆಯುವ ಹೊರಮೈ, ಅಗಲ ಕಿಟಕಿಗಳು ನೋಡಿದರೆ ಖುಷಿಯಾಗುತ್ತದೆ. ಇದೇ ರೈಲಿನಲ್ಲಿ ಸಂಚರಿಸಿದ ಪ್ರಯಾಣಿಕರೊಬ್ಬರು ತಮ್ಮ ಅನುಭವವನ್ನು ‘ಪ್ರಜಾವಾಣಿ’ಯ ವಾಚಕರವಾಣಿಗೆ ಪತ್ರ ಬರೆಯುವ ಮೂಲಕ ಹಂಚಿಕೊಂಡಿದ್ದರು.

‘ಎಷ್ಟು ಸುಂದರ ವಿನ್ಯಾಸದ ರೈಲು. ಆದರೆ ಶೌಚಾಲಯ ಮಾತ್ರ ಗಬ್ಬುನಾರುತ್ತದೆ. ಪ್ರಯಾಣ ಮುಗಿಸಿ ಮನೆ ಸೇರುವ ಹೊತ್ತಿಗೆ ಮೂತ್ರ ಸೋಂಕಿನಿಂದ ರೋಗಿಯಾಗಿದ್ದೆ’ ಎಂದು ರೈಲ್ವೆ ಇಲಾಖೆಗೆ ಇರುವ ಪ್ರಯಾಣಿಕರ ಕಾಳಜಿಯನ್ನು ಅವರು ಕೊಂಡಾಡಿದ್ದರು.

ರೈಲ್ವೆ ಇಲಾಖೆಯು ಬೋಗಿಗಳು ಮತ್ತು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು, ಪ್ಲಾಟ್‌ಫಾರ್ಮ್‌ಗಳಿಗೆ ಗ್ರಾನೈಟ್ ಕಲ್ಲು ಅಳವಡಿಸಲು, ನಿಲ್ದಾಣಗಳಲ್ಲಿ ವೈಫೈ ಸೌಕರ್ಯ ಒದಗಿಸಲು ಲಕ್ಷಗಟ್ಟಲೆ ಖರ್ಚು ಮಾಡುತ್ತಿದೆ. ಆದರೆ ಹಳಿ ನಿರ್ವಹಣೆ, ಪ್ಯಾಸೆಂಜರ್ ಗಾಡಿಗಳ ಸ್ವಚ್ಛತೆ, ಶೌಚಾಲಯ ನಿರ್ವಹಣೆ, ರೈಲಿನಲ್ಲಿ ಇಂತಿಷ್ಟು ಕಿ.ಮೀ. ಆದ ನಂತರ ನೀರು ಭರ್ತಿಯಂಥ ಮೂಲ ಅಗತ್ಯಗಳ ಕಡೆಗೆ ಕೊಡಬೇಕಾದಷ್ಟು ಗಮನ ಕೊಡುತ್ತಿಲ್ಲ.

ಬೆಂಗಳೂರಿನಿಂದ ಮುಂಬೈಗೆ ಹೋಗುವ ಉದ್ಯಾನ್ ಎಕ್ಸ್‌ಪ್ರೆಸ್ ರಾತ್ರಿ 8.30ಕ್ಕೆ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಹೊರಡುತ್ತದೆ. ಮಾರನೇ ದಿನ ಬೆಳಿಗ್ಗೆ 5.30ಕ್ಕೆ ರಾಯಚೂರು ಮುಟ್ಟುವ ಹೊತ್ತಿಗೆ ರೈಲಿನ ಹಲವು ಬೋಗಿಗಳಲ್ಲಿ ನೀರು ಬಂದ್. ಮುಂಜಾನೆ ದೇಹಬಾಧೆ ತೀರಿಸಿಕೊಳ್ಳಲು ಆಗದೆ ಪ್ರಯಾಣಿಕರು ಅನುಭವಿಸುವ ಕಷ್ಟ ಶತ್ರುವಿಗೂ ಬೇಡ ಎನಿಸುವಂಥದ್ದು. ಅಂದಹಾಗೆ ಮತ್ತೊಂದು ಮಾತು. ಈಗ ಉದ್ಯಾನ್ ಎಕ್ಸ್‌ಪ್ರೆಸ್ ಸಹ ಹೊಸ ವಿನ್ಯಾಸದ ಝಗಮಗ ಬೋಗಿಗಳೊಂದಿಗೆ ಮಿರಮಿರ ಹೊಳೆಯುತ್ತಿದೆ.

ಮುಖ್ಯ ಮಾರ್ಗಗಳಲ್ಲಿ ಸಂಚರಿಸುವ ಪ್ರಮುಖ